# ಇಲ್ಲಿ ಮುದ್ದಿನ ಪ್ರಾಣಿ ಇಲಿ, ಹಲ್ಲಿ, ಹಾವು!

ಚಿತ್ರ– ಲೇಖನ:
**ಕೆದಿಲ ಸುಲೋಚನಾ ಭೀಮ ಭಟ್**

ನನ್ನ ಎರಡನೆ ಮಗಳು ಅಮೆರಿಕ ಸಂಯುಕ್ತ ಸಂಸ್ಥಾನದ ಕ್ಯಾಲಿಫೋರ್ನಿಯ ರಾಜ್ಯದ ಕುಪರ್ಟಿನೊ ಎಂಬ ಊರಲ್ಲಿ ಸುಮಾರು ಹತ್ತು ವರ್ಷಗಳಿಂದ ನೆಲೆಸಿದ್ದಾಳೆ. ಅವಳ ಭೇಟಿಗೆ ನಾನೂ ಅಲ್ಲಿಗೆ ಹೋಗಿದ್ದೆ. ಅಳಿಯ, ಮಗಳು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋದರು. ಭಾರತದಲ್ಲಿ ಯಾವ ಪ್ರವಾಸೀ ತಾಣವನ್ನೂ ನೋಡದ ನನಗೆ ಎಲ್ಲವೂ ಹೊಸತೆ. ಎಲ್ಲವೂ ಅದ್ಭುತವೇ.

ಆದರೆ ನನಗೆ ವಿಚಿತ್ರ ಎನಿಸಿದ್ದು ಮಗಳು ಪೆಟ್ಕೊ ಎಂಬ ಬೃಹತ್ ಅಂಗಡಿಗೆ ಕರೆದುಕೊಂಡು ಹೋದಾಗ. ಅಲ್ಲಿ ಇಲಿ, ಹೆಗ್ಗಣ, ಉಡ, ಹಾವು, ಓತಿಕ್ಯಾತ, ಹಲ್ಲಿ, ಆಮೆ ಇನ್ನೂ ಏನೇನೋ ನನಗೆ ಹೆಸರು ಗೊತ್ತಿಲ್ಲದ ಹಲವು ಪುಟ್ಟ ಪ್ರಾಣಿಗಳನ್ನು ಮಾರಾಟಕ್ಕೆ ಇಟ್ಟಿದ್ದರು. 'ಇವನ್ನೆಲ್ಲ ಮಾರಾಟಕ್ಕಿಟ್ಟಿದ್ದು ತಿನ್ನುವುದಕ್ಕಲ್ಲ. ಸಾಕುವುದಕ್ಕೆ' ಎಂದು ಮಗಳು ಹೇಳಿದಾಗ ಅಚ್ಚರಿಯಾಯ್ತು.

ಅದುವರೆಗೂ ನಾನು ನಾಯಿ, ಬೆಕ್ಕು ಮಾತ್ರ ಸಾಕುಪ್ರಾಣಿಗಳೆಂದು ತಿಳಿದಿದ್ದೆ. ಹೆಗ್ಗಣ, ಗೋಸುಂಬೆಗಳನ್ನು ಸಾಕುವುದು ನನಗೆ ಗೊತ್ತೇ ಇಲ್ಲದ ವಿಚಾರ. ಬರೀ ಇಂಥ ಪ್ರಾಣಿಗಳು ಮಾತ್ರ ಅಲ್ಲ, ಅವುಗಳಿಗೆ ಕೊಡುವ ಆಹಾರ, ಆಹಾರ ತಿನ್ನಲು ಬೇಕಾದ ಬಟ್ಟಲು, ಮಲಗುವ ಸರಂಜಾಮು, ಆಡಲು ಆಟಿಕೆ ಸಕಲವೂ ಅಲ್ಲಿತ್ತು. ನಾನು ಮನೆಯಲ್ಲಿ ಇಲಿಪಾಷಾಣ ಹಾಕಿ ಸಾಯಿಸುವ ಇಲಿಗೆ ಸುಮಾರು 5 ಡಾಲರ್ ಬೆಲೆ ಇದ್ದರೆ, ಹೆಗ್ಗಣಕ್ಕೆ 15 ರಿಂದ 18 ಡಾಲರ್ ಬೆಲೆ ಇತ್ತು! ಇಲಿಯ ಜಾತಿಗೆ ಸೇರಿದ ಗುನಿಯಪಿಗ್, ಹ್ಯಾಮ್‌ಸ್ಟರ್‌ಗೆ 3 ರಿಂದ 10 ಡಾಲರ್ ತನಕ ಇತ್ತು.

ನನಗೆ ವಿಶೇಷ ಅನಿಸಿದ್ದು ನಮ್ಮ ಮನೆಯ ಗೋಡೆ ಮೇಲೆ ಓಡಾಡುತ್ತಿರುವ ಹಲ್ಲಿಯ ಬೆಲೆ 7 ಡಾಲರ್ ಎಂದು ತಿಳಿದಾಗ. ರಾತ್ರಿ ವೇಳೆ ನಮ್ಮ ಮನೆ ಗೋಡೆ ಮೇಲೆ ವಿದ್ಯುತ್ ಬಲ್ಬಿನ ಬೆಳಕಿಗೆ ಮುತ್ತುವ ಹಾತೆ ತಿನ್ನಲು 15–20 ಹಲ್ಲಿಗಳು ಬರುವುದು ನೆನಪಾಯ್ತು. ಕುತೂಹಲಗೊಂಡು 'ಅವುಗಳನ್ನು ಸಾಕುವುದು ಹೇಗೆ?' ಎಂದು ಕೇಳಿದೆ. 'ಅದು ಸುಲಭದ ವಿಷಯವಲ್ಲ. 7 ಡಾಲರ್ ಕೊಟ್ಟ ಮಾತ್ರಕ್ಕೆ ಮುಗಿಯಲಿಲ್ಲ. ಗೂಡನ್ನು ಖರೀದಿಸಬೇಕು. ಅದಕ್ಕೆ ಪ್ರತ್ಯೇಕ ಶುಲ್ಕ. ಅವುಗಳ ಗೂಡಿನ ಉಷ್ಣತೆ ಕಾಪಾಡಲು ಒಂದು ಲ್ಯಾಂಪ್ ಬೇಕು. ಅದಕ್ಕೆ 15 ಡಾಲರ್. ಅಲ್ಲದೆ ಅವುಗಳಿಗೆ ಪ್ರತಿದಿನ ಆಹಾರವಾಗಿ 2 ಡಾಲರ್ ಬೆಲೆಯ ಹುಳ ಕೊಡಬೇಕು...'– ಹೀಗೆ ಮಗಳು ಹೇಳುತ್ತಲೇ ಇದ್ದಳು. ವರ್ಷಕ್ಕೆ 730 ಡಾಲರ್ ಬರೀ ಆಹಾರಕ್ಕೆ ಮುಗಿಯುತ್ತದೆ ಎಂದು ನಾನು ಮನದಲ್ಲೇ ಲೆಕ್ಕ ಹಾಕಿದೆ.

ಹಾವಿನಲ್ಲೂ ತರಾವರಿ ಜಾತಿಗಳು! ಕಿಂಗ್ ಸ್ನೇಕ್, ಕಾರ್ನ್ ಸ್ನೇಕ್, ಮಿಲ್ಕ್ ಸ್ನೇಕ್, ಗೋಫರ್ ಹಾವು, ಕೇರೆ ಹಾವು, ವಿವಿಧ ಜಾತಿಯ ಹೆಬ್ಬಾವುಗಳು... ಇವುಗಳಲ್ಲಿ ಮಿಲ್ಕ್ ಸ್ನೇಕ್ ಅಂತೂ ಹಲವು ಬಣ್ಣಗಳಿಂದ ಕೂಡಿ ಅತ್ಯಾಕರ್ಷಕವಾಗಿತ್ತು. ಇವುಗಳ ಬೆಲೆ ಜಾತಿ ಮತ್ತು ಗಾತ್ರಕ್ಕೆ ಅನುಗುಣ 35 ಡಾಲರ್‌ನಿಂದ 200 ಡಾಲರ್‌ವರೆಗೆ ಇತ್ತು. ನಮ್ಮ ಮನೆಯ ಅಟ್ಟಕ್ಕೆ ಇಲಿ ಹಿಡಿಯಲು ಬರುವ ಕೇರೆ ಹಾವಿನ ಬೆಲೆ ಸುಮಾರು 50 ಡಾಲರ್. ಈ ಹಾವುಗಳಿಗೆ ತಿನ್ನಲು ಒಣಗಿಸಿದ ಇಲಿಯನ್ನು ಕೊಡುತ್ತಾರೆ. ವಿಶೇಷವೆಂದರೆ ಈ ಹಾವುಗಳಿಗೆ ದಿನಾ ಆಹಾರ ಕೊಡಬೇಕೆಂದೇನೂ ಇಲ್ಲ. ವಾರಕ್ಕೊಮ್ಮೆ ಅಥವಾ ನಾಲ್ಕು ದಿನಗಳಿಗೊಮ್ಮೆ ಕೊಟ್ಟರೆ ಸಾಕಾಗುತ್ತದೆ. ಹಾವು ಕೂಡ ಹಲ್ಲಿಯ ಹಾಗೆ ಶೀತರಕ್ತ ಪ್ರಾಣಿಯಾದ್ದರಿಂದ ಅದಕ್ಕೂ ಒಂದು ಲ್ಯಾಂಪ್ ಬೇಕು. ಬೆಚ್ಚಗೆ ಇದ್ದರೆ ಮಾತ್ರ ದೇಹದ ಜೀರ್ಣಕ್ರಿಯೆ ನಡೆಯುತ್ತದೆ. ಒಂದು ಸಲ ಆಹಾರ ತಿಂದು ಆದ ಮೇಲೆ ಲ್ಯಾಂಪ್ ಬೆಳಕು ಬೀಳದ ಜಾಗದಲ್ಲಿ ಅಂದರೆ ಅದರ ಗೂಡಿನಲ್ಲಿ ಹೋಗಿ ಮಲಗುತ್ತದೆ. ಹಾಗಾಗಿ ಸಾಕುವವರು ಹಾವಿನ ಗೂಡು (ಟೊಳ್ಳು ಇರುವ ಮರದ ತುಂಡು), ಲ್ಯಾಂಪ್, ಆಹಾರ, ನೀರು ಕಾಗೂ ತಿನಿಸು ತಿನ್ನಲು ಪುಟ್ಟ ಪಾತ್ರೆಯನ್ನೂ ಖರೀದಿಸಬೇಕಾಗುತ್ತದೆ. ಇವುಗಳಲ್ಲದೆ ಇಲ್ಲಿ ಆಮೆ. ಉಡ, ಬಣ್ಣಬಣ್ಣದ ಮೀನು, ಹಕ್ಕಿಗಳೂ ಮಾರಾಟಕ್ಕಿವೆ.

ಆದರೆ ಇಲ್ಲಿ ಹೆಚ್ಚಿನ ಜನರ ಮೆಚ್ಚಿನ ಸಾಕುಪ್ರಾಣಿ ನಾಯಿ ಮತ್ತು ಬೆಕ್ಕು. ಇವುಗಳಿಗಂತೂ ರಾಜಮರ್ಯಾದೆ. ಇವುಗಳಿಗೆ ಮಲಗಲು ಮೆತ್ತನೆ ಹಾಸಿಗೆ, ಸ್ನಾನಕ್ಕೆ ಬಗೆಬಗೆ ಶಾಂಪೂಗಳು, ಆಡಲು ವಿವಿಧ ಆಟಿಕೆಗಳು, ತಿನ್ನಲು ತರತರದ ವಿಟಮಿನ್‌ಯುಕ್ತ ತಿಂಡಿಗಳು, ಋತುಮಾನಗಳಿಗೆ






ಮಾರಾಟಕ್ಕಿಟ್ಟ ಹಲ್ಲಿ, ಓತಿಕ್ಯಾತ, ಹಾವು




ಶಾಪಿಂಗ್ ಮಾಲ್‌ನಲ್ಲಿ ಲೇಖಕಿ




ಪ್ರಾಣಿಗಳಿಗೆಂದು ಶಾಪಿಂಗ್ ಮಾಲ್

ಅನುಗುಣವಾಗಿ ತರಾವರಿ ಡ್ರೆಸ್‌ಗಳು, ಹಬ್ಬದ ದಿನಗಳಲ್ಲಂತೂ ಮಕ್ಕಳಿಗೆ ಯಾವ ರೀತಿ ಡ್ರೆಸ್ ಮಾಡ್ತಾರೋ ಅದೇ ರೀತಿ ಈ ಪ್ರಾಣಿಗಳಿಗೂ ಅಲಂಕಾರ ಮಾಡಿ ಸಂಭ್ರಮಿಸುತ್ತಾರೆ.

ಬೇರೆ ಪ್ರಾಣಿಗಳಿಗೆ ಹೋಲಿಸಿದರೆ ಈ ಅಂಗಡಿಯಲ್ಲಿ ನಾಯಿ, ಬೆಕ್ಕುಗಳನ್ನು ಕಡಿಮೆ ಸಂಖ್ಯೆಯಲ್ಲಿ ಮಾರುತ್ತಾರೆ. ಪಾರ್ಕ್, ಬೀದಿ ಇತ್ಯಾದಿ ಸ್ಥಳಗಳಲ್ಲಿ ಅನಾಥವಾಗಿ ಬಿದ್ದ ನಾಯಿ, ಬೆಕ್ಕುಗಳನ್ನು ಪ್ರಾಣಿದಯಾ ಸಂಘದ ಸಹಕಾರದೊಂದಿಗೆ (ಹ್ಯೂಮನ್ ಸೊಸೈಟಿ) ಇಲ್ಲಿ ಸಾಕಲಾಗುತ್ತದೆ. ಹಣದ ಅಡಚಣೆಯಿಂದ ಸಾಕಲಾಗದವರೂ ಇಲ್ಲಿಗೆ ತಂದು ಬಿಡುತ್ತಾರೆ. ಅಂಗಡಿಯವರು ಈ ಪ್ರಾಣಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಹಾಗೂ ರೇಬಿಸ್ ಚುಚ್ಚುಮದ್ದು ಕೊಟ್ಟು ಮಾರಾಟಕ್ಕೆ ಇಡುತ್ತಾರೆ. ಇಂಥ ಪ್ರಾಣಿಗಳನ್ನು 120 ಡಾಲರ್ ಕೊಟ್ಟು ಖರೀದಿಸಬಹುದು. ತಿಂಗಳಿಗೆ 80 ಡಾಲರ್ ಕೊಟ್ಟು ದತ್ತು ತೆಗೆದುಕೊಂಡರೆ ಅಂಗಡಿಯವರೇ ಸಾಕುತ್ತಾರೆ. ದತ್ತು ತೆಗೆದುಕೊಂಡವರು ಯಾವಾಗ ಬೇಕಾದರೂ ಬಂದು ಆ ನಾಯಿ ಅಥವಾ ಬೆಕ್ಕಿನೊಡನೆ ಸಮಯ ಕಳೆಯಬಹುದು.

ದತ್ತು ಯಾಕೆ ತೆಗೆದುಕೊಳ್ಳುತ್ತಾರೆಂದರೆ ಕೆಲವರ ಮನೆಯಲ್ಲಿ ಎಲ್ಲರಿಗೂ ಪ್ರಾಣಿ ಮೇಲೆ ಪ್ರೀತಿ ಇರುವುದಿಲ್ಲ. ಕೆಲವರಿಗೆ ಪ್ರಾಣಿಗಳ ಒಡನಾಟ ಅಲರ್ಜಿ ತರುತ್ತದೆ. ಕೆಲವೊಮ್ಮೆ ಮನೆಯಲ್ಲಿ ಜಾಗ ಇರುವುದಿಲ್ಲ. ಹೀಗೆ ಕಾರಣಗಳು ಹಲವಾರು. ಇನ್ನು ಕೆಲವು ಪ್ರಾಣಿಪ್ರಿಯರು ಇಲ್ಲಿಗೆ ಬಂದು ಸ್ವಯಂಸೇವಕರಾಗಿ ಕೆಲಸ ಮಾಡುತ್ತಾರೆ. ಇವರ ಕೆಲಸ ಈ ಪ್ರಾಣಿಗಳ ಉಚ್ಚೆ, ಹೇಲುಗಳನ್ನು ತೆಗೆಯುವುದು, ಗೂಡುಗಳನ್ನು ಶುಚಿಗೊಳಿಸುವುದು, ಸ್ನಾನ ಮಾಡಿಸುವುದು, ಆಹಾರ ಕೊಡುವುದು ಹಾಗೂ ಮುದ್ದು ಮಾಡುವುದು. ಒಟ್ಟಿನಲ್ಲಿ ಮಕ್ಕಳಂತೆ ಈ ಪ್ರಾಣಿಗಳನ್ನೂ ಕಾಣುತ್ತಾರೆ.

ಎಲ್ಲಕ್ಕಿಂತ ವಿಶೇಷ ಈ ಅಂಗಡಿಯಲ್ಲಿ ನಾಯಿಗಳಿಗೂ ಒಂದು ಬ್ಯೂಟಿಪಾರ್ಲರ್ ಇದೆ. ತಮ್ಮ ಮನಸಿನ ಭಾವಕ್ಕೆ ತಕ್ಕಂತೆ ನಾಯಿಗಳಿಗೂ ಹೇರ್‌ಕಟ್ ಮಾಡಿಸುತ್ತಾರೆ. ತಲೆಗೆ ಕ್ಲಿಪ್, ರಿಬ್ಬನ್ ತೊಡಿಸುತ್ತಾರೆ. ಪರಿಮಳಭರಿತ ಶಾಂಪೂ ಹಾಕಿ ಸ್ನಾನ ಮಾಡಿಸುತ್ತಾರೆ. ನಾಯಿಗೆ ಈ ಪರಿಯ ಸ್ನಾನ, ವೇಷಭೂಷಣ ಇನ್ನೆಲ್ಲೂ ನಾನು ನೋಡಿಲ್ಲ.